# ಜಾಗತಿಕ ಸಾಹಿತ್ಯದ ಚಿತ್ರಕ ಲೇಖಕ

## ಗುಂಥರ್ ಗ್ರಾಸ್ (1927-2015)



ಸಾಹಿತ್ಯ ಹಾಗೂ ಕಲೆಯಲ್ಲಿ ಜಾಗತಿಕ ಖ್ಯಾತಿಯನ್ನು ಪಡೆದ ಜರ್ಮನಿಯ ಲೇಖಕ ಗುಂಥರ್ ಗ್ರಾಸ್ 1927ರಲ್ಲಿ ಡಾನ್ ಝಿಗ್‌ನಲ್ಲಿ ಜನಿಸಿದ. ಸುದೀರ್ಘ ಕಾಲ ಬರೆದ ಈ ಲೇಖಕ ತನ್ನ ಚಿತ್ರಕ ಶೈಲಿಯ ಬರವಣಿಗೆಯಿಂದ ಓದುಗರನ್ನು ಸೆಳೆದಿದ್ದಾನೆ. ಎರಡನೇ ಮಹಾಯುದ್ಧದಲ್ಲಿ ಜರ್ಮನ್ ಸೇನೆಯ ಟ್ಯಾಂಕ್ ಒಂದರ ಫೈರ್‌ಮನ್ ಕೆಲಸದಲ್ಲಿದ್ದ ಅವನು ಅಲ್ಲಿ ಗಾಯಗೊಂಡ. 1945ರಲ್ಲಿ ಅಮೆರಿಕ ಅವನನ್ನು ಬಂಧಿಸಿತು. ಬಿಡುಗಡೆಯ ಬಳಿಕ ಗಣಿ ಕಾರ್ಮಿಕನಾಗಿ ಕೆಲಸ ಮಾಡಿದ. ಬಳಿಕ ಬರ್ಲಿನ್‌ನಲ್ಲಿ ಶಿಕ್ಷಣ ಪಡೆದ. ನಾಝಿಗಳ ವಿರುದ್ಧ ಹೋರಾಡಿದ ಸಂಘಟನೆ 'ಗ್ರೂಪ್ 47' ಸೇರಿಕೊಂಡ. ಈ ಸಂಘಟನೆಯು ಸಾಹಿತ್ಯಿಕ ಭಾಷೆಯ ವಿಕಾಸವನ್ನು ಕೈಗೊಂಡಿತು. ಇದು ನಾಝೀ ಕಾಲದಲ್ಲಿ ಕ್ಲಿಷ್ಟ ಹಾಗೂ ಭಾವುಕ ಪ್ರಚಾರ ಮಾಡುವ ಗದ್ಯ ಭಾಷೆಯ ವಿರುದ್ಧ ಸೈದ್ಧಾಂತಿಕ ಹೋರಾಟವನ್ನು ನಡೆಸಿತು.

ಗ್ರಾಸ್ ಜರ್ಮನಿಯಲ್ಲಿ ತನ್ನ ಕಾದಂಬರಿಗಳಷ್ಟೇ ಅಲ್ಲದೆ ವಿವಾದಿತ ರಾಜಕಾರಣದಿಂದಾಗಿಯೂ ಪರಿಚಿತನಾಗಿದ್ದ. ಜರ್ಮನಿಯ ರಾಜಕೀಯ ಮುಖಂಡ ವಿಲಿ ಬ್ರಾಂಡ್‌ಗೆ ಹತ್ತು ವರ್ಷಗಳ ಕಾಲ ಭಾಷಣಗಳನ್ನು ಬರೆದುಕೊಟ್ಟಿದ್ದ. ಅದೂ ಅಲ್ಲದೆ ಜರ್ಮನಿಯಲ್ಲಿ ಸೋಶಿಯಲ್ ಡೆಮಾಕ್ರಟಿಕ್ ಪಕ್ಷವನ್ನು ದೀರ್ಘಕಾಲದ ವರೆಗೆ ಬೆಂಬಲಿಸಿದವನು ಗುಂಥರ್ ಗ್ರಾಸ್. ಅವನು ಜರ್ಮನಿಯ ಪುನರ್ ಏಕೀಕರಣವನ್ನು ವಿರೋಧಿಸಿದ ಏಕೈಕ ಬುದ್ಧಿಜೀವಿ ಕೂಡ.